

## ಡಿ.ಎನ್. ಗೀತಾ

ತಮ್ಮ ಸರಳ ಹಾಗೂ ಮೊನಚು ಶೈಲಿಯ ಬರವಣಿಗೆಗಳಿಂದ ಈಗಾಗಲೇ ಕನ್ನಡ ಸಾರಸ್ವತ ಲೋಕದಲ್ಲಿ ಹೆಸರಾಗಿರುವ ಬರಹಗಾರ್ತಿ ಡಿ.ಎನ್. ಗೀತಾರವರು ಹುಟ್ಟಿದ್ದು ಮಲೆನಾಡಿನ ಮಡಿಲಿನ ಆಗುಂಬೆಯ ಸಮೀಪದ ಬಿದರಗೋಡಿನಲ್ಲಿ. ಪ್ರಾಥಮಿಕ ಶಿಕ್ಷಣವನ್ನು ಬಿದರಗೋಡಿನಲ್ಲಿ ಮುಗಿಸಿ ಚಿಕ್ಕಬಳ್ಳಾಪುರದಲ್ಲಿ ಓದು ಮುಂದುವರಿಸಿದ ಇವರು ಗೌರಿಬಿದನೂರಿನಲ್ಲಿ ಬಿ.ಎಸ್ಸಿ ಪದವಿಯನ್ನು 1992ರಲ್ಲಿ ಪಡೆದರು. ತನ್ನ 13ನೇ ವಯಸ್ಸಿನಲ್ಲಿ ಕವನಗಳನ್ನು ರಚಿಸಲು ಆರಂಭಿಸಿ ಅನೇಕ ರಾಜ್ಯ ಮಟ್ಟದ ಕವನ ಸ್ಪರ್ಧೆಗಳಲ್ಲಿ ಬಹುಮಾನಗಳನ್ನೂ ಗಳಿಸಿದ್ದಾರೆ.

1995ರಲ್ಲಿ ಸರ್ಕಾರದ ಉದಯೋನ್ಮುಖರ ಪ್ರೋತ್ಸಾಹ ಯೋಜನೆಯಡಿಯಲ್ಲಿ ಇವರ 'ನನ್ನೊಳಗಿನ ಕವಿತೆಗಳು' ಎಂಬ ಕವನ ಸಂಕಲನ ಪ್ರಕಟಗೊಂಡಿದೆ.

1994ರಿಂದ ಇವರ ಕಥೆಗಳು ನಾಡಿನ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ. ಇದುವರೆಗೆ ಸುಮಾರು 150 ಕಥೆಗಳು ಪ್ರಕಟಗೊಂಡಿವೆ. 2012ರಲ್ಲಿ ಈಕೆಯ ಮೊದಲ ಕಾದಂಬರಿ 'ಸುಳಿಗಾಳಿ' ಕರ್ಮವೀರ ವಾರಪತ್ರಿಕೆಯಲ್ಲಿ ಪ್ರಕಟಗೊಂಡರೆ, 2014ರಲ್ಲಿ ಎರಡನೆಯ ಕಾದಂಬರಿ 'ಹುಣ್ಣಿಮೆ ನೆರಳು' ಮಂಗಳ ವಾರಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಇದುವರೆಗೆ ಒಂದು ಕವನ ಸಂಕಲನ, ಐದು ಕಥಾ ಸಂಕಲನ, ಒಂದು ಮಕ್ಕಳ ಕಥಾ ಸಂಕಲನ, ಎರಡು ಕಾದಂಬರಿಗಳೂ ಸೇರಿದಂತೆ ಒಟ್ಟು ಒಂಭತ್ತು ಕೃತಿಗಳು ಪ್ರಕಟಗೊಂಡಿವೆ. 2015ರಲ್ಲಿ ಇವರ ಮೊದಲ ಕಾದಂಬರಿಗೆ ಕರ್ನಾಟಕ ಲೇಖಕಿಯರ ಸಂಘದ ತ್ರಿವೇಣಿ ದತ್ತಿನಿಧಿ ಪ್ರಶಸ್ತಿ ಲಭಿಸಿರುತ್ತದೆ.

2012ರಿಂದ ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಇವರ ಕಥೆಗಳು ಪ್ರಸಾರಗೊಳ್ಳುತ್ತಿವೆ. 2015ರಲ್ಲಿ ಬಿಗ್ ಎಫ್.ಎಮ್‌ನಲ್ಲಿ ಪ್ರಸಾರವಾಗಿದ್ದ ಖ್ಯಾತ ಚಿತ್ರ ನಿರ್ದೇಶಕ ನಾಗಾಭರಣರ ನೆನಪಿನ ಆಟೋಗ್ರಾಫ್ ಕಾರ್ಯಕ್ರಮದಲ್ಲಿ ಇವರ ಕಥೆಗಳು ಪ್ರಸಾರಗೊಂಡಿವೆ.

ಇತ್ತೀಚೆಗೆ ಇವರು ತಮ್ಮದೇ ಪ್ರಕಾಶನವನ್ನು (ಶ್ರೀ ವಿಜಯನಾಗ ಪಬ್ಲಿಕೇಷನ್ಸ್) ಆರಂಭಿಸಿ ತಮ್ಮ ಎರಡನೆಯ ಕಾದಂಬರಿ (ಹುಣ್ಣಿಮೆ ನೆರಳು) ಯನ್ನು ಹೊರತಂದಿದ್ದಾರೆ. ಪ್ರಕಟವಾಗಿರುವ ಇವರ ಎರಡು ಕಾದಂಬರಿಗಳೂ ಪತ್ತೇದಾರಿ ಕಾದಂಬರಿಗಳಾಗಿರುವುದು ವಿಶೇಷವಾಗಿದೆ.

'ಸುಧಾ' ಓದುಗರಿಗೂ ಚಿರಪರಿಚಿತರಾಗಿರುವ ಡಿ.ಎನ್.ಗೀತಾ ಅವರ ಈ ವಿನೂತನ ಕಾದಂಬರಿ 'ಮೌನ ಮಂಟಪ' ಓದುಗರಿಗೆ ಮುದ ನೀಡುವುದರಲ್ಲಿ ಸಂಶಯವಿಲ್ಲ.

ಚಿಕ್ಕಮ್ಮ ಕಲಾವತಿಯ ವಾಚಾಳಿತನ, ಅವಳ ವಾತ್ಸಲ್ಯ ಮತ್ತೆ ಮತ್ತೆ ಅವಳನ್ನು ಕಾಡತೊಡಗಿದವು. ಆಗಿನ್ನೂ ಅವಳು ಏಳು ವರ್ಷಗಳ ಪುಟ್ಟ ಹುಡುಗಿ. ಅಮ್ಮನ ಅನಿರೀಕ್ಷಿತ ಅಗಲಿಕೆಯಿಂದ ಮನಬಂದಂತೆ ವರ್ತಿಸುತ್ತಿದ್ದ ದಿನಗಳವು. ಆಗಲೇ ತಂದೆ ಒಂದು ಸಂಜೆ ಕಲಾವತಿಯನ್ನು ಕರೆತಂದಿದ್ದರು. 'ನೋಡು ಖುತು, ಇನ್ಮೇಲೆ ಇವಳೇ ನಿನ್ನ ಚಿಕ್ಕಮ್ಮ....' ಎಂದಿದ್ದರು. ಪುಟ್ಟ ಖುತುವಿಗೆ ಅದೆಲ್ಲಿಯ ಆವೇಶ ಬಂದಿತ್ತೋ, ಬಂಗಲೆಯ ಹೂದೋಟದಿಂದ ಜೋಪಾನವಾಗಿ ಸಂಗ್ರಹಿಸಿ ತಂದಿದ್ದ ಕಲ್ಲೊಂದನ್ನು ಕಲಾವತಿಯ ಹಣೆಗೆ ಬೀಸಿ ಒಗೆದಿದ್ದಳು. ಆಕೆಯ ಹಣೆಯಿಂದ ರಕ್ತ ಚಿಮ್ಮತೊಡಗಿದಾಗ ಪುರುಷೋತ್ತಮರಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ತಿಳಿಯದೇ ಮೂಕರಾಗಿ ನಿಂತುಬಿಟ್ಟಿದ್ದರು. ಆದರೆ ಕಲಾವತಿ ಹಣೆಯನ್ನು ಒತ್ತಿ ಹಿಡಿಯುತ್ತಾ ಕೆಳಬಿದ್ದ ಕಲ್ಲನ್ನು ಖುತುವಿಗೆ ತೆಗೆದುಕೊಟ್ಟಿದ್ದಳು.

'ತೊಗೋ ಪುಟ್ಟಿ, ಹೀಗೆ ಹೊಡೆಯೋದರಿಂದ ನಿನ್ನ ಮನಸ್ಸಿಗೆ ಖುಷಿಯಾಗುತ್ತೆ ಅನ್ನೋದಾದ್ರೆ ಮತ್ತೊಂದು ಸಾರಿ ಹೊಡಿ...'

ಅನಾಥಾಶ್ರಮದಲ್ಲಿ ಬೆಳೆದ ಹುಡುಗಿ ಕಲಾವತಿಯಿಂದ ಇಂಥ ಮಾತುಗಳನ್ನು ನಿರೀಕ್ಷಿಸಿರದ ಖುತು ಚಕಿತಳಾಗಿದ್ದಳು.

ಹಣೆಯಲ್ಲಿ ಚಿಮ್ಮುತ್ತಿದ್ದ ರಕ್ತವನ್ನು ಒತ್ತಿ ಹಿಡಿಯಲು ಪ್ರಯತ್ನಿಸುತ್ತಿದ್ದ ಕಲಾವತಿಯನ್ನು ನೋಡಿದ್ದಳು. ತಾಯಿಯನ್ನೇ ನೋಡಿದಂತಾಗಿತ್ತು.

'ಚಿಕ್ಕಮ್ಮ....ಸಾರಿ, ಇನ್ಮೇಲೆ ನಿನ್ನ ನಾನ್ಯಾವತ್ತೂ ಹೊಡೆಯಲ್ಲ...' ಎಂದು ತಬ್ಬಿಕೊಂಡಿದ್ದಳು.

ಕಲಾವತಿಗೂ ಆ ಕ್ಷಣಕ್ಕೆ ಕಣ್ತುಂಬಿ ಬಂದಿತ್ತು. ಅನಾಥಾಶ್ರಮಕ್ಕೆ ಬಂದಿದ್ದ ಲಾಯರ್ ಪುರುಷೋತ್ತಮರು ತನ್ನನ್ನು ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಜೊತೆಗೆ ತಾಯಿಯ ಅಗಲಿಕೆಯಿಂದ ಕಂಗೆಟ್ಟಿರುವ ತನ್ನ ಪುಟ್ಟ ಮಗಳಿಗೆ ಅಮ್ಮನಾಗಬೇಕೆಂಬ ಆತನ ನಿಬಂಧನೆಗೆ ಒಪ್ಪಿ, ಅನಾಥಾಶ್ರಮದ ಮುಖ್ಯಸ್ಥರ ಒಪ್ಪಿಗೆಯನ್ನು ಪಡೆದೇ ಆತನನ್ನು ರಿಜಿಸ್ಟರ್ ಮದುವೆಯಾಗಿ ಬಂಗಲೆಗೆ ಬಂದಿದ್ದಳು.

ಅಂದಿನಿಂದ ಇಂದಿನವರೆಗೂ ಪುರುಷೋತ್ತಮರಿಗೆ ತಾನು ಕೊಟ್ಟ ಮಾತನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿದ್ದಾರೆ ಕಲಾವತಿ. ಬಂಗಲೆಗೆ ಬಂದ ಒಂದೇ ವರ್ಷಕ್ಕೆ ಮಗ ಭರತ ಹುಟ್ಟಿದರೂ ಅವಳ ಮೇಲಿನ ಪ್ರೀತಿ ಒಂದಿಷ್ಟೂ ಕಡಿಮೆಯಾಗಿರಲಿಲ್ಲ. ಹೆತ್ತ ಮಗಳನ್ನು ಪ್ರೀತಿಸುವಂತೆ ತನ್ನನ್ನು ಪ್ರೀತಿಸುವ ಚಿಕ್ಕಮ್ಮನೆಂದರೆ ಖುತುವಿಗೂ ಪ್ರೀತಿಯೇ. ಬಂಗಲೆಯ ನಿಶ್ಶಬ್ದತೆಗೆ ಒಮ್ಮೊಮ್ಮೆ ಭಯಪಡುವ ಅದೇ ಮನಸ್ಸು ಚಿಕ್ಕಮ್ಮನನ್ನು ನೆನೆದು ಉಲ್ಲಾಸಗೊಳ್ಳುತ್ತದೆ.

ಚಿಕ್ಕಮ್ಮನ ಯೋಚನೆಯಲ್ಲೇ ಸ್ನಾನ ಮುಗಿಸಿ ಕುರ್ತವೊಂದನ್ನು ಧರಿಸಿಕೊಂಡು ಕೆಳಗಿಳಿದು ಬಂದಳು.

ಡೈನಿಂಗ್ ಹಾಲಿನಲ್ಲಿ ಕಲಾವತಿ ಊಟಕ್ಕೆ ಎಲ್ಲವನ್ನೂ ಅಣಿಗೊಳಿಸಿದ್ದರು. ಅವರೊಂದಿಗೆ ಕುಳಿತು ಸೇರಿದಷ್ಟು ಊಟ ಮಾಡಿದಳು.

'ಹೋಗಿ ಸ್ವಲ್ಪ ಹೊತ್ತು ರಿಲ್ಯಾಕ್ಸ್ ಮಾಡು ಖುತು, ನಿಂಗೂ ಸಾಕಾಗಿರುತ್ತೆ..' ಕಲಾವತಿ ಖುತುವನ್ನು ಉಪಚರಿಸಿ ಮತ್ತೆ ಅವಳನ್ನು ರೂಮಿಗೇ ಕಳುಹಿಸಿದರು.

ಖುತುವಿಗೂ ಈ ದಿನ ಸಾಕಾಗಿತ್ತು. ಮಂಚದ ಮೇಲೆ ಅಂಗಾತ ಮಲಗಿ ಕಣ್ಮುಚ್ಚಿಕೊಂಡಳು. ಕಣ್ಮುಚ್ಚಿದರೂ ದಾರುಣವಾಗಿ ಕೊಲೆಯಾದ ವಿದ್ಯಾರ್ಥಿ ಪ್ರಶಾಂತನ ಚಿತ್ರವೇ ಕಾಣತೊಡಗಿತು.

ಪ್ರಶಾಂತ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ. ಆತನ ತಂದೆ ದೇವನಹಳ್ಳಿಯ ಸಮೀಪದಲ್ಲಿ ಸಣ್ಣ ರೈತರಾಗಿದ್ದಾರೆ. ತನ್ನನ್ನು ಕಷ್ಟಪಟ್ಟು ಸಾಕಿ ಸಲಹಿದ ಹೆತ್ತವರನ್ನು ಮನಸ್ಸಿನಲ್ಲಿಟ್ಟುಕೊಂಡು ಕಷ್ಟಪಟ್ಟು ಓದುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿಗೆ ಇಂಥ ದುರ್ಮರಣವೇ? ಬೆಳಿಗ್ಗೆ ಕಾಲೇಜಿನ ಕ್ಯಾಂಪಸ್ಸಿನಲ್ಲಿ ಜನಜಾತ್ರೆಯೇ ನೆರೆದಿತ್ತು. ಪೊಲೀಸರಿಂದ, ವಿವಿಧ ಮಾಧ್ಯಮಗಳವರಿಂದ, ವಿದ್ಯಾರ್ಥಿಗಳ ಪೋಷಕರಿಂದ ಕಾಲೇಜಿನ ಆವರಣ ತುಂಬಿ ಹೋಗಿತ್ತು. ಕೊಲೆಯಾದ ಪ್ರಶಾಂತನನ್ನು ನೋಡಿ ಪ್ರಜ್ಞೆ ತಪ್ಪುವಂತಾಗಿತ್ತು. ಅಷ್ಟು ಭೀಕರವಾಗಿ ಕೊಲೆಯಾಗಿದ್ದ. ಇಂಥ ಘಟನೆ ಕ್ಯಾಂಪಸ್ಸಿನಲ್ಲಿ ನಡೆಯುವುದೆಂದರೆ...! ರಾತ್ರಿಯೂ ಕೂಡ ಸರತಿಯಂತೆ ಕಾಲೇಜಿನ ಕಾವಲುಗಾರರಿರುತ್ತಾರೆ. ಹಾಗಿರುವಾಗ ಹಾಸ್ಟೆಲ್ಲಿನಲ್ಲಿ ಕೊಲೆ